ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಲಯ ಯಾದಗಿರಿ.

ಸಿಸಿ ನಂ. **439/2019**

| | | |
|---|---|---|
| ಸಾಕ್ಷಿಯ ಹೆಸರುಃ | ಪ್ರಭುಗೌಡ | ಪ್ರಾಸಾಃ 3 |
| ತಂದೆ/ಗಂಡನ ಹೆಸರುಃ | ಬಸವರಾಜಪ್ಪಗೌಡ | ಚಾಸಾಃ 4 |
| ವಯಸ್ಸು ಃ | 37 ವರ್ಷ | ದಿಃ 07-03-2026 |
| ಉದ್ಯೋಗಃ | ಪೊಲಿಸ ಪೇದೆ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಯಾದಗಿರಿ. | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ

ನಾನು 2016 ರಿಂದ 2021 ರವರೆಗೆ ಯಾದಗಿರಿ (ಗ್ರಾ) ಪೋಲಿಸ ಠಾಣೆಯಲ್ಲಿ ನಾನು ಪೊಲಿಸ ಪೇದೆ ಎಂದು ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕ 06-03-2019 ರಂದು ಚಾಸಾಃ 1 ರವರಿಗೆ ಮಾಹಿತಿ ಬಂದ ಮೇರೆಗೆ ನಾನು, ಚಾಸಾಃ 5 ಮತ್ತು ಪಂಚರನ್ನು ಕರೆದುಕೊಂಡು ಬಂದಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ದಾಳಿ ಮಾಡಲು ಕರೆದುಕೊಂಡು ಚಾಸಾಃ 1 ರವರು ಹೋಗಿರುತ್ತಾರೆ. ಸದರಿ ಠಾಣೆಯಿಂದ 5.45 ಕ್ಕೆ ಹೊರಟು 6.00 ಗಂಟೆಗೆ ಬಂದಳ್ಳಿ ಗ್ರಾಮಕ್ಕೆ ಹೋಗಿರುತ್ತೇವೆ. ಮರೆಯಾಗಿ ನಿಂತು ನೋಡಿದಾಗ ಆರೋಪಿತನು ಅಂಗಡಿಯಲ್ಲಿ ಮದ್ಯ ಮಾರಾಟ ಮಾಡುವುದನ್ನು ಖಚಿತಪಡಿಸಿಕೊಂಡು ದಾಳಿ ಮಾಡಿದಾಗ, ಆರೋಪಿತನು ಓಡಿ ಹೋಗಿರುತ್ತಾನೆ. ಆರೋಪಿತನ ಬಗ್ಗೆ ವಿಚಾರಿಸಿದಾಗ ಅವನ ಹೆಸರು ಗುಂಜಲಪ್ಪ ತಂದೆ ನೀಲಪ್ಪ ಎಂದು ತಿಳಿದುಬಂದಿರುತ್ತದೆ. ಸ್ಥಳದಲ್ಲಿ 90 ಎಮ್, ಎಲ್ ನ 24 ಪೌಚುಗಳು, 5 ಟಿನ್ ಬಿಯರ ಸಿಕ್ಕಿರುತ್ತವೆ. ಒಟ್ಟು ಅಂದಾಜು ಮೊತ್ತ 1,027/- ರೂ. ಎಫ್ ಎಸ್, ಎಲ್ ವರದಿಗಾಗಿ ಸ್ಯಾಂಪಲ ಪಂಚರ ಸಮಕ್ಷಮದಲ್ಲಿ ಸಂಜೆಃ 6.15 ರಿಂದ 7.15 ರವೆರೆಗ ಜರುಗಿಸಿರುತ್ತೇವೆ. ನಂತರ 7.30 ಕ್ಕೆ ಬಂದು ಚಾಸಾಃ 7 ರವರಿಗೆ ವರದಿಯನ್ನು ನೀಡಿರುತ್ತೇವೆ. ಸಾಕ್ಷಿಯು ಆರೋಪಿತನನ್ನು ಮತ್ತು ಮು. ಮಾ. ಗಳನ್ನು ನೋಡಿದರೆ ಗುರುತಿಸಿರುತ್ತೇನೆ ಎಂದು ನುಡಿಯುತ್ತಾರೆ.

ಪಾಟಿ ಸವಾಲುಃ ಆರೋಪಿ ಪರ ಶ್ರೀ ಎನ್. ಸಿ. ವೈ ವಕೀಲರಿಂದ.

1. ಭಾತ್ಮಿ ಬಂದಾಗ ನಾನು ಠಾಣೆಯಲ್ಲಿದ್ದೆ. ಚಾಸಾಃ 5 ರವರು ಠಾಣೆಯಲ್ಲಿದ್ದರು. ಪಂಚರನ್ನು ಚಾಸಾಃ 1 ರವರು ಫೋನ ಕರೆ ಮಾಡಿ ಕರೆಸಿರುತ್ತಾರೆ. ನನ್ನ ಹೇಳಿಕೆಯಲ್ಲಿ ಫೋನ ಮಾಡಿ ಕರೆಸಿರುತ್ತಾರೆ ಎಂದು ಹೇಳಿಲ್ಲ. ಪೊಲಿಸ ಠಾಣೆಯಿಂದ ಬಂದಳ್ಳಿ ಗ್ರಾಮ 5 ಕಿ.ಮೀ. ಅಂತರದಲ್ಲಿದೆ. ಸದರಿ 10-15 ನಿಮಿಷದಲ್ಲಿ ಬಂದಳ್ಳಿ ಗ್ರಾಮಕ್ಕೆ ಹೋಗಬಹುದು. 100-120 ಮೀಟರ ದೂರದಿಂದ ನೋಡಿರುತ್ತೇವೆ. ಸದರಿ ಮಾಹಿತಿ ಮೂಲಕ ಅಂಗಡಿ ಗೊತ್ತಾಗಿರುತ್ತದೆ. ಗ್ರಾಮದಲ್ಲಿ 30 ರಿಂದ 40 ಅಂಗಡಿಗಳು ಇವೆ ಎಂದರೆ ಸರಿ. ಸದರಿ ಮನೆಯಲ್ಲಿಯೇ ಅಂಗಡಿ ಇರುತ್ತದೆ. ಸದರಿ ಅಂಗಡಿಯ ದಾಖಲಾತಿಗಳನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡಿರುವುದಿಲ್ಲ. ಸದರಿ ಮು. ಮಾ. ಗಳು ಬೇರೆ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಗೊತ್ತಿಲ್ಲ. ನಾನು ಮು. ಮಾ. ಗಳನ್ನು ನೋಡಿರುವುದಿಲ್ಲ. ಜಪ್ತಿ ಪಂಚನಾಮೆಯನ್ನು ಸ್ಟೇಷನ ರೈಟರ ಬರೆದಿರುತ್ತಾರೆ. ಟೈಪ ಮಾಡಿರುತ್ತಾರೆ. ಗುನ್ನೆ ಸ್ಥಳದಲ್ಲಿ ಟೈಪ ಮಾಡಿರುತ್ತೇವೆ. ಪ್ರಿಂಟ ಎಲ್ಲಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-1 ರ ಮೇಲೆ ಯಾರು ಸಹಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ನಾನು ದಾಳಿಗೆ ಹೊಗಿರುವುದಿಲ್ಲ ಪೊಲಿಸ ಠಾಣೆಯಲ್ಲಿ ಕುಳಿತು ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಚಾಸಾಃ 1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಲಯ ಯಾದಗಿರಿ.

ಸಿಸಿ ನಂ. **439/2019**

| | | |
|---|---|---|
| ಸಾಕ್ಷಿಯ ಹೆಸರುಃ | ವಿಠಲ | ಪ್ರಾಸಾಃ 1 |
| ತಂದೆ/ಗಂಡನ ಹೆಸರುಃ | ಬರ್ಮಯ್ಯ | ಚಾಸಾಃ 1 |
| ವಯಸ್ಸು ಃ | 65 ವರ್ಷ | ದಿಃ 07-03-2026 |
| ಉದ್ಯೋಗಃ | ನಿವೃತ್ತ ಪೊಲಿಸ ಅಧಿಕಾರಿ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಗುಲ್ಬರ್ಗಾ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ

ನಾನು ದಿನಾಂಕಃ 01-03-2017 ರಿಂದ 31-03-2021 ರವರೆಗೆ ಯಾದಗಿರಿ (ಗ್ರಾ) ಪೋಲಿಸ ಠಾಣೆಯಲ್ಲಿ ನಾನು ಎ.ಎಸ್.ಐ ಎಂದು ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕ 06-03-2019 ರಂದು 5.00 ಪಿ.ಎಮ್. ಸುಮಾರಿಗೆ ನಾನು ಠಾಣೆಯಲ್ಲಿದ್ದಾಗ, ಬಂದಳ್ಳಿ ಗ್ರಾಮದಲ್ಲಿ ಯಾರೋ ಒಬ್ಬ ವ್ಯಕ್ತಿ ಮದ್ಯ ಮಾರಾಟ ಮಾಡುತ್ತಿದ್ದಾನೆ ಎಂದು ಮಾಹಿತಿ ಬಂದ ಮೇರೆಗೆ ಪಂಚರನ್ನು ಕರೆಸಿ ಸಿಬ್ಬಂದಿಗಳಿಗೆ ಮಾಹಿತಿ ತಿಳಿಸಿ, ಠಾಣೆಯಿಂದ ಗುನ್ನೆ ಸ್ಥಳಕ್ಕೆ ಹೊರಟು, 6.15 ಗಂಟೆಗೆ ಬಂದಳ್ಳಿ ಗ್ರಾಮಕ್ಕೆ ಹೋಗಿ ಮರೆಯಾಗಿ ನಿಂತು ನೋಡಲಾಗಿ, ಆರೊಪಿತನು ಮದ್ಯ ಮಾರಾಟ ಮಾಡುವುದನ್ನು ಖಚಿತಪಡಿಸಿಕೊಂಡು ದಾಳಿ ಮಾಡಿದಾಗ ಸದರಿ ಸ್ಥಳದಲ್ಲಿ 90 ಎಮ್. ಎಲ್ ನ 24 ಓರಿಜಿನಲ್ ಚಾಯ್ಸ್, ಅಂದಾಜು ಕಿಮ್ಮತ್ತು 727/-ರೂ, ಮೂರು 30 ಎಮ್, ಎಲ್ 5 ಕೆಫ್ ಸ್ಟ್ರಾಂಗ್, ಎರಡು ಸ್ಯಾಂಪಲ ಎಫ್. ಎಸ್. ಎಲ್ ವರದಿಗಾಗಿ ಪಂಚರ ಸಮಕ್ಷಮದಲ್ಲಿ ಜಪ್ತಿ ಮಾಡಿಕೊಂಡಿರುತ್ತೇವೆ. ಪಂಚನಾಮೆಯನ್ನು 6.15 ಗಂಟೆಯಿಂದ 7.15 ಗಂಟೆಯವರೆಗೆ ಜರುಗಿಸಿರುತ್ತೇವೆ. ನಂತರ ಠಾಣೆಗೆ ಬಂದು ಮು. ಮಾ. ಮತ್ತು ಜಪ್ತಿ ಪಂಚನಾಮೆಯನ್ನು ಚಾಸಾಃ 7 ರವರಿಗೆ ನೀಡಿರುತ್ತೇನೆ. ಸಾಕ್ಷಿಯು ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ಜಪ್ತಿ ಪಂಚನಾಮೆಯಾಗಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿ ನಿಪಿ-1(ಎ) ಎಂದು ಗುರುತಿಸಲಾಯಿತು. ವರದಿಯನ್ನು ನಿಪಿ-2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಯಾಂಪಲ್ ನೋಡಿ ಗುರುತಿಸಿರುವುದರಿಂದ ಅದನ್ನು ಮು. ಮಾ. 1 ಮತ್ತು 2 ಎಂದು ಗುರುತಿಸಲಾಯಿತು.

ಪಾಟಿ ಸವಾಲುಃ ಆರೋಪಿ ಪರ ಶ್ರೀ ಎನ್. ಸಿ. ವೈ ವಕೀಲರಿಂದ.

1. ಭಾತ್ಮಿ ಬಂದಾಗ ನಾನು ಠಾಣೆಯಲ್ಲಿದೆ. ಸದರಿ ಚಾಸಾಃ 4 ಮತ್ತು 5 ರವರನ್ನು ಕರೆಸಿರುತ್ತೇನೆ. ಪಂಚರನ್ನು ಫೋನ ಮುಖಾಂತರ ತಿಳಿಸಿ ಕರೆಸಿರುತ್ತೇವೆ. ಸದರಿ ನನ್ನ ವರದಿಯಲ್ಲಿ ಫೋನ ಮುಖಾಂತರ ಕರೆಸಿರುತ್ತೇವೆ ಎಂದು ಬರೆದಿರುತ್ತೇವೆ. ಬಂದಳ್ಳಿ ಗ್ರಾಮದಿಂದ ಪೊಲಿಸ ಠಾಣೆ ಒಂದುವರೆ ಕಿ.ಮೀ ಅಂತರದಲ್ಲಿರುತ್ತದೆ. ಪೊಲಿಸ ಠಾಣೆಯಿಂದ ಬಂದಳ್ಳಿಗೆ ಸಂಜೆ 5.45 ಕ್ಕೆ ಬಿಟ್ಟು 6.00 ಗಂಟೆಗೆ ತಲುಪಿರುತ್ತೇವೆ. ಸದರಿ ಆರೋಪಿತನ ಮನೆ ಒಬ್ಬ ವ್ಯಕ್ತಿ ತೋರಿಸಿರುತ್ತಾನೆ. ಸದರಿ ಕಿರಾಣಿ ಅಂಗಡಿ ಇತ್ತು. ಅಂಗಡಿಗೆ ಹೆಸರು ಇರುವುದನ್ನು ನೋಡಿರುವುದಿಲ್ಲ. ಸದರಿ ಅಂಗಡಿಯ ಮಾಲೀಕತ್ವದ ವರದಿಯನ್ನು ಪಡೆದುಕೊಂಡಿರುವುದಿಲ್ಲ. ಸದರಿ ಪ್ರತ್ಯೇಕ ಸಾಕ್ಷಿದಾರರನ್ನು ವಿಚಾರಣೆ ಮಾಡಿರುವುದಿಲ್ಲ. ಮದ್ಯ ಎಲ್ಲಿಂದ ತಂದಿರುತ್ತಾರೆ ಎಂದು ಕೇಳಿರುವುದಿಲ್ಲ. ಸದರಿ ಪಂಚನಾಮೆಯನ್ನು ಗುನ್ನೆ ಸ್ಥಳದಲ್ಲಿ ಜರುಗಿಸಿರುತ್ತೇವೆ. ಪಂಚನಾಮೆಯನ್ನು ಟೈಪ ಮಾಡಿರುತ್ತೇವೆ. ಪ್ರಿಂಟ ಎಲ್ಲಿ ತೆಗೆದಿರುತ್ತೇವೆ ಎಂದು ನೆನಪಿಲ್ಲ. ಸದರಿ ಮು. ಮಾ. ಗಳು ಮದ್ಯದ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸರಿ. ಮು. ಮಾ. ಗಳ ಮೇಲೆ ಸರಕಾರದ ನಿಶಾನೆ ಇತ್ತಾ? ಎಂದರೆ ಸಾಕ್ಷಿಯು ಸಮರ್ಪಕವಾಗಿ ಉತ್ತರ ನೀಡಿರುವುದಿಲ್ಲ. ನಾನು ಗುನ್ನೆ ಸ್ಥಳಕ್ಕೆ ಹೋಗಿರುವುದಿಲ್ಲ, ಆರೋಪಿತನಿಗೂ ಮತ್ತು ಮು. ಮಾ. ಗೂ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ಅಂಕಿ ಸಂಖ್ಯೆಗೋಸ್ಕರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ